# ವಿಲನ್ ಪಾತ್ರವೇ ನನಗಿಷ್ಟ

**ಯುವ ಶೆಟ್ಟಿ**
**ಝೀ ಕನ್ನಡದ 'ಕಾಮಿಡಿ ಕಿಲಾಡಿಗಳು' ನಟ**

◆ **ನಿಮ್ಮ ಹೆಸರು ಬದಲಾಗಿದ್ದು ಹೇಗೆ?**

ಅದು ಇತ್ತೀಚಿನ ಬೆಳವಣಿಗೆ. ನಂಬಿಕೆಯ ಕಾರಣಕ್ಕೆ ಬದಲಾಯಿಸಿದ್ದೇನೆ. ನನ್ನ ಮೂಲ ಹೆಸರು ವಿಶ್ವ ಅದು ಚಿತ್ರರಂಗರದಲ್ಲಿ ಅಷ್ಟೇನೂ ಪರಿಚಯ ಕೂಡ ಆಗಿರಲಿಲ್ಲ. ಮೊದಲು ವಿಲನ್ ನಟನಾಗಿಯೇ ಪ್ರವೇಶಪಡೆದೆ. ಅದೇ ಸಮಯದಲ್ಲಿ ನಮ್ಮ ತಂಡದಿಂದಲೇ ಒಂದು ಸಿನಿಮಾ ಮಾಡುವ ಯೋಚನೆ ಬಂತು. ಆ ವೇಳೆಗೆ ಯಾವ ಕೆಲಸವೂ ನಿರೀಕ್ಷಿತ ಫಲಿತಾಂಶ ನೀಡುತ್ತಿರಲಿಲ್ಲ. ಆಗ ಸಂಖ್ಯಾಶಾಸ್ತ್ರಜ್ಞರಲ್ಲಿ ಕೇಳಿದಾಗ ಹೆಸರು. ಬದಲಿಸಿದರೆ ಒಳ್ಳೆಯದು ಎಂದರು. ಅವರ ಸಲಹೆಯಂತೆ ಯುವ ಶೆಟ್ಟಿ ಎಂದು ಹೆಸರು ಬದಲಿಸಿದೆ. ಅದರಿಂದ ನನಗೆ ಒಳ್ಳೆಯದಾಗಿದೆ ಎಂದು ಅನಿಸುತ್ತದೆ.

◆ **'ಕಾಮಿಡಿ ಕಿಲಾಡಿ'ಯ ಬದಲಾಗುವ ವೇಷಗಳಲ್ಲಿ ಇವತ್ತಿಗೂ ರೋಮಾಂಚನ ಹುಟ್ಟಿಸುವ ಸನ್ನಿವೇಶ, ಸಂದರ್ಭಗಳು...**

ಹಾಸ್ಯ ನಟ ನಾನಲ್ಲ. ಕಾಮಿಡಿ ಮಾಡಬಲ್ಲೆ ಎನ್ನುವ ಭರವಸೆಯೂ ಇರಲಿಲ್ಲ. ಚಿಕ್ಕಪುಟ್ಟ ಪಾತ್ರಗಳನ್ನು ಸಿನಿಮಾಗಳಲ್ಲಿ ಮಾಡ್ತಾ ಇದ್ದೆ. ಆದರೆ ಅವೆಲ್ಲ ಗಂಭೀರವಾಗಿಯೇ ಇರುತ್ತಿದ್ದವು. ಆಕಸ್ಮಿಕವಾಗಿ ಆಡಿಷನ್ ನೀಡಿದೆ. ಅಲ್ಲಿ ನನ್ನನ್ನು ನೋಡಿದ ರೀತಿಯೇ ಬೇರೆ ಇತ್ತು. ನನ್ನನ್ನು ವಿಲನ್ ಪಾತ್ರಕ್ಕೆ ಸೂಕ್ತ ಆಗುತ್ತಾನೆ ಎಂದು ಗ್ರಹಿಸಿದಂತೆ ಇತ್ತು. ಎರಡನೇ ರೌಂಡಿಗೆ ಆಯ್ಕೆ ಮಾಡಿಕೊಂಡರು. ನಟನೆಯ ಆರಂಭದಲ್ಲಿ ತುಂಬ ಕಷ್ಟಪಟ್ಟಿದ್ದೇನೆ. ಮೊದಲು ತುಳುನಲ್ಲೇ ಹೆಚ್ಚು ಮಾತನಾಡುತ್ತಿದ್ದೆ. ಡೈಲಾಗ್ ಸರಿಯಾಗಿ ಹೇಳಲು ಆಗುತ್ತಿರಲಿಲ್ಲ. ಒಮ್ಮೆ ಇದರಲ್ಲಿ ಸೈಕೊ ಕಿಲ್ಲರ್ ಎನ್ನುವ ಥೀಮ್ ಕೊಟ್ಟರು. ಹಾಗಾಗಿ ಸೈಕೊ ವಿಶ್ವ ಎನ್ನುವ ಹೆಸರು ಬಂತು. ಗಂಭೀರ ವ್ಯಕ್ತಿತ್ವದ ನಾನು ಹಾಸ್ಯವನ್ನೂ ಮಾಡಬಹುದು. ನಾನು ನಗೆಯಾಡದೆ ವೀಕ್ಷಕರನ್ನು ನಗಿಸಬಹುದು ಎನ್ನುವುದು ಗೊತ್ತಾಯಿತು. ಸೀರಿಯಸ್ ಆಗಿ ಮಾತನಾಡಿದರೂ ಅದರಲ್ಲಿ ಹಾಸ್ಯ ಮಾಡುವುದನ್ನು ಕಲಿತೆ. 'ಕಾಮಿಡಿ ಕಿಲಾಡಿಗಳು' ರೂಪಕ(ಸ್ಕಿಟ್)ಗಳಲ್ಲಿ ಪುಟ್ಟ ಪುಟ್ಟ ಪಾತ್ರಗಳೂ ಬರುತ್ತವೆ. ಅವುಗಳನ್ನು ಸಾಮಾನ್ಯವಾಗಿ ಯಾರೂ ಮಾಡಲು ಮುಂದೆ ಬರ್ತಿರಲಿಲ್ಲ. ಅಂತಹ ಮೂರು ವೇಷಗಳನ್ನು ಕೊಟ್ಟರೂ ನಾನು ಮಾಡುತ್ತಿದ್ದೆ. ಅದರಲ್ಲಿ ವೇಷ– ಭಾಷೆ ಎಲ್ಲ ಬದಲಾಗಿರುತ್ತಿತ್ತು. ಆಗ ಸ್ಕಿಟ್‌ನಲ್ಲಿ ಹೆಚ್ಚು ಗುರುತಿಸುವಂತೆ ಆದೆ. ಚಿಕ್ಕ ಪಾತ್ರದಲ್ಲಿಯೂ ಹೊಸತನ ತೋರಿಸುವುದು ಇಷ್ಟ ಆಯಿತು. ಅದು ಹೆಚ್ಚು ಬೇಡಿಕೆಯನ್ನು ಸೃಷ್ಟಿಸಿತು. ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡ ಆಗಿದ್ದೆ.

ಒಂದು ಸ್ಕಿಟ್‌ನಲ್ಲಿ ಆರು ಪಾತ್ರಗಳನ್ನು ಮಾಡಿದ್ದೆ. ಅದರ ಕಥೆ– ರಂಗ ವಿನ್ಯಾಸ ತುಂಬ ಸಂಕೀರ್ಣವಾಗಿತ್ತು. ಅದು ತುಂಬ ಖುಷಿ ಕೊಡ್ತು. ನೇಪಾಳಿಯೊಬ್ಬರ ಪಾತ್ರ ಮಾಡಿದ್ದೆ ಅದರಲ್ಲಿ ಅವರ ಸಂಸ್ಕೃತಿಯನ್ನು ಬಿಂಬಿಸುವ ಪ್ರಯತ್ನ ಮಾಡಿದ್ದೆ. ಮಾತನ್ನೂ ಅನುಕರಣೆ ಮಾಡಿದ್ದೆ. ಮೀಸೆಯನ್ನೂ ವ್ಯಾಕ್ಸ್ ಹಾಕಿ ನಾಟಿ ಮಾಡಿಸಿದ್ದೆ. ಮರೆಯಲಾರದ ಹಲವು ಪಾತ್ರಗಳಿವೆ. ನನ್ನ ವೃತ್ತಿ ಬದುಕಿಗೆ ಭದ್ರತೆಯನ್ನು ನೀಡಿದ್ದು ಸೈಕೊ ಕಿಲ್ಲರ್ ಪಾತ್ರ. ಅದು ತುಂಬ ಇಷ್ಟ. ಚಿಕ್ಕವಯಸ್ಸಿನಿಂದ ಹಿರಿಯ ವಯಸ್ಸಿನ ತನಕ, ಯುವತಿಯಿಂದ– ಅಜ್ಜಿ ಪಾತ್ರಗಳನ್ನೂ ನಿರ್ವಹಿಸಿದ್ದೇನೆ. ನಾನು ಸ್ತ್ರೀ ಪಾತ್ರ ಮಾಡುತ್ತೇನೆ ಎಂದು ಅನಿಸಿರಲಿಲ್ಲ. ಇವೆಲ್ಲ ನನ್ನನ್ನು ಪುಳಕಿಸಿದ ಪಾತ್ರಗಳು.

◆ **ನಿಮ್ಮಲ್ಲಿ ಒಬ್ಬ ನಟ ಇದ್ದಾನೆ ಎಂದು ಗೊತ್ತಾಗಿದ್ದು ಹೇಗೆ?**

ಬೇರೆ ಬೇರೆ ಕ್ಷೇತ್ರದಲ್ಲಿ ಆಸಕ್ತಿ ಇತ್ತು. ರಾಜ್ಯಮಟ್ಟದ ಫುಟ್‌ಬಾಲ್ ಆಟಗಾರ ಆಗಿದ್ದೆ. ಕ್ರಿಕೆಟ್ ಚೆನ್ನಾಗಿ ಆಡುತ್ತಿದ್ದೆ. ಸೇನೆಯನ್ನು ಸೇರುವ ತವಕವೂ ಇತ್ತು. ಯಾವ ಕ್ಷೇತ್ರ ಆಯ್ಕೆ ಮಾಡಿಕೊಳ್ಳಬೇಕು ಎಂದು ನಿಖರವಾಗಿ ಗೊತ್ತಿರಲಿಲ್ಲ. ನನ್ನಲ್ಲಿ ಒಬ್ಬ ನಟ ಇದ್ದ ಎನ್ನುವುದು ಶಾಲೆಯಲ್ಲಿ ಒಮ್ಮೆ ಪಿಕ್ ಅಂಡ್ ಆಕ್ಟ್ ಮಾಡುವ ಸನ್ನಿವೇಶ ಬಂತು. ಆಗ ಬಂದ ಚಪ್ಪಾಳೆಯ ಸುರಿಮಳೆಯಿಂದ ರೋಮಾಂಚಿತನಾಗಿದ್ದೆ. ಅದು ಅನೇಕ ದಿನಗಳ ಕಾಲ ನನ್ನನ್ನು ಕಾಡಿತ್ತು. ಅಪ್ಪ ರಂಗಭೂಮಿ ನಟ. ಒಮ್ಮೊಮ್ಮೆ ತಮ್ಮ ನಟನೆಯ ವಿವಿಧ ಮಜಲುಗಳನ್ನು ಆಡಿ ತೋರಿಸುತ್ತಿದ್ದರು. ಅದು ಎಲ್ಲೋ ಕಾರಣ ಆಯಿತು. ಡಿಗ್ರಿ ಆದ ಮೇಲೆ ಒಂದು ನಾಟಕ ಮಾಡಿದೆ ಆನಂತರ ನಟನೇ ಆಗಬೇಕು ಎಂದು ನಿರ್ಧರಿಸಿದೆ.

◆ **ಸಿನಿಮಾ– ಟೀವಿಯನ್ನು ಹೇಗೆ ನಿಭಾಯಿಸುತ್ತೀರಿ?**

ಕೊರೊನಾ ಕಾರಣಕ್ಕೆ ತುಂಬ ಕೆಲಸಗಳು ನಿಧಾನವಾದವು. ಕಾಮಿಡಿ ಕಿಲಾಡಿಗಳು ಮುಗಿಯಿತು. ಸದ್ಯ ಐದು ಸಿನಿಮಾಗಳು ಸಿಕ್ಕಿವೆ. ಸದ್ಯ ಮೂರು ಚಿತ್ರೀಕರಣ ಆಗಬೇಕು. ಅದರಲ್ಲಿ ನಾಲ್ಕು ಸಿನಿಮಾದಲ್ಲಿ ಮುಖ್ಯ ಪಾತ್ರದಲ್ಲಿ ಇರುತ್ತೇನೆ. ಒಂದರಲ್ಲಿ ಸೈಕೋ ಪಾತ್ರವನ್ನು ಮಾಡುತ್ತಿದ್ದೇನೆ. 'ಜನನಿ' ಅಂತ ಕಿರುಚಿತ್ರ ಮಾಡಿದ್ದೇವೆ. ನಮ್ಮದೇ ಒಂದು ತಂಡ ಕಟ್ಟಿಕೊಂಡಿದ್ದೇವೆ. ಶಿವರಾಜ್ ಕುಮಾರ್ ಅವರ ಜೊತೆ ವಿಲನ್ ಪಾತ್ರವನ್ನು ಮಾಡುತ್ತಿದ್ದೇನೆ. ಅದು ನನ್ನ ಬೆಳವಣಿಗೆಗೆ ದೊಡ್ಡ ವೇದಿಕೆ ಆಗುತ್ತದೆ ಎಂದು ಭಾವಿಸಿದ್ದೇನೆ. ನಟನೆ ಪ್ಯಾಶನ್ ಆಗಿರುವುದರಿಂದ ಒತ್ತಡ ಅನಿಸುವುದಿಲ್ಲ. ಖುಷಿ ಅನಿಸುತ್ತದೆ. ಅದನ್ನು ಬ್ಯಾಲೆನ್ಸ್ ಮಾಡುವುದೇ ಜಾಣ್ಮೆ.

■ **ರಾಘವೇಂದ್ರ ಕೆ.**

